ಮೈಸೂರ ಗೆಜೆಟ್ಟು.

ಸರ್ಕಾರದಿಂದ ಫಾಯಿಷ್ ಆದದ್ದು.

ಬೆಂಗಳೂರು, ಶನಿವಾರ, ಜೂನ್ ತಾ 7, ಸನ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

4ನೇ ಭಾಗ.

ಮೈಸೂರು ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಗಳು ವ ರೆಗ್ಯೂಲೇಷನ್ಗಳು.

ಸನ 1884ನೇ ಇಸವಿಯ 1ನೇ ರೆಗ್ಯೂಲೇಷನ್.

ಸನ 1884ನೇ ಇಸವಿಯ ಮೈಸೂರು ಚೀಫ್ ಕೋರ್ಟು ರೆಗ್ಯೂಲೇಷನ್.

ಮೈಸೂರು ಶೀಮೆಯ ಚೀಫ್ ಕೋರ್ಟು ವಿಷಾಡನ್ನು ತಿದ್ದುಪಡಿ ಮಾಡುವದು ಆವಶ್ಯಕವಾದದರಿಂದ ಮೈಸೂರು ಶೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಯಿದರಡಿ ಕಂಡ ಪ್ರಕಾರ ವಿಧಿಸುತ್ತಾರೆ:—

ಚಿಕ್ಕ ಹೆಸರು.

1ನೇ ಸೆಕ್ಷನ್.—ಈ ರೆಗ್ಯೂಲೇಷನ್ "1884ನೇ ಇಸವಿಯ ಮೈಸೂರು ಶೀಮೆ ಚೀಫ್ ಕೋರ್ಟು ರೆಗ್ಯೂಲೇಷನ್" ಯೆಂದು ಕರೆಯಲ್ಪಡತಕ್ಕದ್ದು.

ವ್ಯಾಪ್ತಿ.

ಈ ರೆಗ್ಯೂಲೇಷನ್ ಮೈಸೂರು ರಾಷ್ಟ್ರದ ತವಾಂ ಪ್ರದೇಶಗಳಿಗೂ ವ್ಯಾಪಿಸಿ ಅದು 1884ನೇ ಮೇ ಯಿಪ್ಪತ್ತೆಂಟನೇ ತಾರೀಖಿನಲ್ಲಿ ಜಾರೀಗೆ ಬರತಕ್ಕದ್ದು. ಆದರೆ, ಇದರಲ್ಲಿ ಅಡಗಿರುವ ಯಾವ ಅಂಶವೂ, ಬ್ರಿಟಿಷ್ ಸರ್ಕಾರದವರಿಗೆ ಉಂಟು ಮಾಡಲ್ಪಟ್ಟ ಯಾವ ಅಧಿಕಾರವನ್ನಾಗಲಿ ಬಾಧಕ ಪಡಿಸತಕ್ಕದ್ದಲ್ಲವು.

ರದ್ದೀಯತಿ.

2ನೇ ಸೆಕ್ಷನ್.—ಸದರೀ ತಾರೀಖಿನಲ್ಲಿ ಮತ್ತು ಆ ತರುವಾಯ, 1879ನೇ ಆಗಸ್ಟು 27ನೇ ಮಕ್ಕಂ 236ನೇ I J, ನಂಬರ್ ಮತ್ತು 1879ನೇ ಇಸವಿ 10ನೇ ಅಕ್ಟೋಬರ್ 281ನೇ I J, ವ 282ನೇ I J, ನಂಬರ್ಗಳ ಇಂಡ್ಯ ಗವರ್ಮೆಂಟ್ ಫಾರ್ಮ್ ಇಲಾಖಾ ಇಸ್ತಿಹಾರ್ ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೂಲ್ಸ್‌ಯಾನೆ ನಿಬಂಧನೆಗಳು ರದ್ದು ಮಾಡಲ್ಪಡತಕ್ಕವು.

ಅರ್ಥವಿವರಣೆಯ ಕಲಂ.

3ನೇ ಸೆಕ್ಷನ್.—ಈ ರೆಗ್ಯೂಲೇಷನ್ನಲ್ಲಿ ಸಂದರ್ಭದ ದೆಸೆಯಿಂದ ವಿರುದ್ಧವಾದ ಅಭಿಪ್ರಾಯ ಕಾಣಬಾರದೆ ಯಿದ್ದರೆ, "ಚೀಫ್ ಕೋರ್ಟು." ಅಂದರೆ, ಈ ರೆಗ್ಯೂಲೇಷನ್ ಅನುಸರಿಸಿ ವಿಷಾಡಿಸೋಣಾದ ಮೈಸೂರು ಚೀಫ್ ಕೋರ್ಟು ಎಂತಲೂ "ಚೀಫ್ ಜಡ್ಜ್." ಅಂದರೆ, ಈ ರೆಗ್ಯೂಲೇಷನ್ ಅನುಸರಿಸಿ ನೇಮಿಸಲ್ಪಟ್ಟ ಸದರೀ ಚೀಫ್ ಕೋರ್ಟಿನ ಚೀಫ್ ಜಡ್ಜಿಯೆಂತಲೂ ಯೆಣಿಸಲ್ಪಡತಕ್ಕದ್ದು: ಮತ್ತು ಹಾಲೀಜಾರೀಲಿರುವ ಯಾವದಾದರೂ

ರೆಗ್ಯೂಲೇಷ್ಯ, ಆಕ್ಟ್ಯ, ಅಥವಾ ಇತರ ಕಾನೂನಲ್ಲಿ "ಚೀಫ್ ಕೋರ್ಟಿಗಾಗಲಿ, ಹೈ ಕೋರ್ಟಿಗಾಗಲಿ, ಸೂಚನೆಯು, ಈ ರೆಗ್ಯೂಲೇಷ್ಯ ಅನುಸರಿಸಿ ವಿಸ್ತಾರಾದ ಚೀಫ್ ಕೋರ್ಟಿಗೆ ಮಾಡಲ್ಪಟ್ಟಂತೆ ಎಣಿಸಲ್ಪಡತಕ್ಕದ್ದು.

"ಫುಲ್ ಬೆಂಚ್" ಅಂದರೆ ಚೀಫ್ ಕೋರ್ಟಿನ ತವೊಂ ಜಡ್ಜ್ಗಳೂ ಸೇರಿ ಯಿರತಕ್ಕ ಬಂದು ನ್ಯಾಯ ಸ್ಥಾನವೆಂದರ್ಥವು.

ಚೀಫ್ ಕೋರ್ಟಿನ ವಿಸ್ತಾರ.

4ನೇ ಸೆಕ್ಷ್ಯ.—ಮೈಸೂರು ಕೀಮೆಯ ಚೀಫ್ ಕೋರ್ಟಿನಲ್ಲಿ ಮೂವರು ಅಥವಾ ಹೆಚ್ಚು ಮಂದಿ ಜಡ್ಜ್ಗಳು ಕೀರಿ ಯಿರತಕ್ಕದ್ದು; ಸದರೀ ಜಡ್ಜ್ಗಳು ಮೈಸೂರು ದೇಶದ ಶ್ರೀಮ್ಮ ಮಹಾರಾಜರವರಿಂದ ನೇಮಿಸಲ್ಪಟ್ಟು ಅವರಿಗೆ ಇಷ್ಟ ವೊಂಟಾದ ಕಾಲದಲ್ಲಿ ತಮ್ಮ ತಮ್ಮ ಉದ್ಯೋಗಗಳನ್ನು ವಹಿಸತಕ್ಕದ್ದು.

ಚೀಫ್ ಕೋರ್ಟಿನ ಜಡ್ಜ್ಗಳ ಪೈಕಿ ಬಬ್ಬರು ಸದರೀ ಕೋರ್ಟಿನ ಚೀಫ್ ಜಡ್ಜ್ರಾಗಿ ಶ್ರೀಮ್ಮ ಮಹಾರಾಜರವರಿಂದ ಮೊಕರರ್ ಮಾಡಲ್ಪಡತಕ್ಕದ್ದು, ಪರಂತು ಈ ರೆಗ್ಯೂಲೇಷ್ಯ ಜಾರಿಗೆ ಬರುವ ಕಾಲದಲ್ಲಿ ಚೀಫ್ ಜಡ್ಜ್ರೀ ಉದ್ಯೋಗವನ್ನು ವಹಿಸಿರುವ ಆಫಿಸರರು ಜಾಸ್ತೀ ಮೊಕರರಾತೀ ಯಾವದೂ ಯಿಲ್ಲದೆ, ಈ ರೆಗ್ಯೂಲೇಷ್ಯ ಅನುಸರಿಸಿ ಯೇರ್ಪಾಡಾದ ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜ್ರಾಗಿರತಕ್ಕದ್ದು.

ಜಡ್ಜ್ರುಗಳ ಪ್ರಾಧಾನ್ಯ.

5ನೇ ಸೆಕ್ಷ್ಯ.—ಚೀಫ್ ಜಡ್ಜ್ರು, ಚೀಫ್ ಕೋರ್ಟಿನ ಇತರ ಜಡ್ಜ್ಗಳ ಮುಂದೆ ದರ್ಜೇಯನ್ನೂ, ಪ್ರಾಧಾನ್ಯವನ್ನೂ, ಪಡೆಯತಕ್ಕದ್ದು, ಸದರೀ ಇತರ ಜಡ್ಜ್ಗಳು ತಮ್ಮಲ್ಲಿ ಪರಸ್ಪರ ಇರುವಂತೆ ಅಂತಾ ಜಡ್ಜ್ಗಳ ಮೊಕರರಾತಿಗಳ ಪೂರ್ವತ್ವ ಪ್ರಕಾರ ದರ್ಜೇಯನ್ನೂ ಪ್ರಾಧಾನ್ಯವನ್ನೂ ಪಡೆಯತಕ್ಕದ್ದು.

ಚೀಫ್ ಕೋರ್ಟಿನ ಮೊಹರ್

6ನೇ ಸೆಕ್ಷ್ಯ.—"ಮೈಸೂರು ಚೀಫ್ ಕೋರ್ಟ್" ಎಂದು ಇಂಗ್ಲೀಷ್ನಲ್ಲಿಯೂ; ಕನ್ನಡದೊಳಗೂ ಕೆತ್ತಲ್ಪಟ್ಟ ಅಕ್ಷರಗಳೊಡನೆ ಶ್ರೀಮ್ಮ ಮೈಸೂರು ಮಹಾರಾಜರವರ ಕುಲಬಿರುದಿನ ಚಿನ್ಹ ಮತ್ತು ಮುದ್ರೆಯುಳ್ಳ ಬಂದು ಮೊಹರನ್ನು ಚೀಫ್ ಕೋರ್ಟಿನವರು ಪಡೆದು ಸಂದರ್ಭಾನುಸಾರ ಅದನ್ನು ಉಪಯೋಗಿಸತಕ್ಕದ್ದು, ಸದರೀ ಮೊಹರ್ ಸಾಧಾರಣವಾಗಿ ಚೀಫ್ ಜಡ್ಜ್ರಯವರ ಜಿಮ್ಮೆಯಲ್ಲಿ ಯಿಡಲ್ಪಡತಕ್ಕದ್ದು.

ಚೀಫ್ ಕೋರ್ಟಿನಿಂದ ಕೊಡಲ್ಪಟ್ಟ, ತವೊಂ ಡಿಕ್ರೀಗಳೂ, ಹುಕ್ಕುಂಗಳೂ, ಇತರ ಪ್ರೊಸೆಸ್ಗಳೂ ಸದರೀ ಮೊಹರ್ನಿಂದ ಮೊಹರ್ ಮಾಡಲ್ಪಟ್ಟು, ಚೀಫ್ ಕೋರ್ಟಿನ ಬಬ್ಬ ಜಡ್ಜ್ರಯಿಂದಾಗಲಿ, ರಿಜಿಸ್ಟ್ರಾರಿಂದಾಗಲಿ, ರುಜು ಮಾಡಲ್ಪಡತಕ್ಕದ್ದು.

ಮಿನಿಸ್ಟೀರಿಯಲ್ಯಾನೆ ಮುಖ್ಯತಾಜೇದಾರೀ ಆಫೀಸರ್ಗಳ ಮೊಕರರಾತಿ.

7ನೇ ಸೆಕ್ಷ್ಯ.—(1) ಚೀಫ್ ಕೋರ್ಟಿನವರು, ಆಗಿಂದಾಗ್ಯೆ ಮತ್ತು ಮೈಸೂರು ಗವರ್ಮೆಂಟಿನಿಂದ ವಿಧಿಸಲ್ಪಡಬಹುದಾದ ಯಾವ ರೂಲ್ಸ್ಗೂ, ನಿರ್ಬಂಧಗಳಿಗೂ, ಬಳಪಟ್ಟು ಚೀಫ್ ಕೋರ್ಟಿನಿಂದ ನ್ಯಾಯ ವಿಚಾರಣೆ ಮಾಡುವ ಬಗ್ಯೂ, ಈ ರೆಗ್ಯೂಲೇಷ್ಯ ಮೂಲಕ ಸದರೀ ಕೋರ್ಟಿಗೆ ಕೊಡಲ್ಪಟ್ಟ, ಮತ್ತು ವಿಧಿಸಲ್ಪಟ್ಟ, ಅಧಿಕಾರಗಳನ್ನು ಚಲಾಯಿಸುವ ಬಗ್ಯೂ, ಕೆಲಸಗಳನ್ನು ನೆರವೇರಿಸುವ ಬಗ್ಯೂ, ಜರೂರಾಗಿರಬಹುದಾದ ಬಬ್ಬ ರಿಜಿಸ್ಟ್ರಾರನ್ನೂ, ಬಬ್ಬ ಡಿಪ್ಟಿ ರಿಜಿಸ್ಟ್ರಾರನ್ನೂ, ಅಂತಾ ಇತರ ಮಿನಿಸ್ಟೀರಿಯಲ್ ಆಫಿಸರರನ್ನೂ ಮೊಕರರ್ ಮಾಡಬಹುದು.

(2) ರಿಜಿಸ್ಟ್ರಾರ ಮತ್ತು ಡಿಪ್ಟಿ ರಿಜಿಸ್ಟ್ರಾರ ಮೊಕರರಾತಿಯು ಮೈಸೂರು ಸರ್ಕಾರದ ಮುಂಜೂರಾತಿಗೆ ಬಳಪಟ್ಟಿರತಕ್ಕದ್ದು.

(3) ಈ ರೆಗ್ಯೂಲೇಷ್ಯ ಜಾರಿಗೆ ಬರುವ ತಾರೀಖಿನಲ್ಲಿ ಕೆಲಸಗಳುಳ್ಳ ಚೀಫ್ ಕೋರ್ಟಿನ ರಿಜಿಸ್ಟ್ರಾರ್ ಮತ್ತು ಇತರ ಮಿನಿಸ್ಟೀರಿಯಲ್ ಆಫೀಸರ್ಗಳು ಯಿದನ್ನು ಅನುಸರಿಸಿ ಮೊಕರರ್ ಮಾಡಲ್ಪಟ್ಟಿರುವದಾಗಿ ಭಾವಿಸಲ್ಪಡತಕ್ಕದ್ದು.

ಮಿನಿಸ್ಟೀರಿಯಲ್ ಆಫಿಸರ್ಗಳ ಕೆಲಸಗಳು.

8ನೇ ಸೆಕ್ಷ್ಯ.—ಹಿಂದಿನಕಡೇ ಸೆಕ್ಷ್ಯ ಅನುಸರಿಸಿ ಮೊಕರರ್ ಮಾಡಲ್ಪಟ್ಟ ಆಫಿಸರ್ಗಳು, ಚೀಫ್ ಕೋರ್ಟಿನವರು ಆಗಿಂದಾಗ್ಯೆ ನಿಯಮಿಸಬಹುದಾದ ಮಿನಿಸ್ಟೀರಿಯಲ್ ಸ್ವರೂಪವುಳ್ಳ ಅಧಿಕಾರಗಳನ್ನು ಚಲಾಯಿಸತಕ್ಕದ್ದು, ಕೆಲಸಗಳನ್ನು ನಿರ್ವಹಿಸತಕ್ಕದ್ದು.

ಮಿನಿಸ್ಟೀರಿಯಲ್ ಆಫಿಸರ್ಗಳ ಸಸ್ಪೆರ್ಷ್ಯ ಮತ್ತು ಬರತರಫ್.

9ನೇ ಸೆಕ್ಷ್ಯ.—ಅಂತಾ ಯಾವ ಆಫಿಸರರಾಗಲಿ, ಚೀಫ್ ಕೋರ್ಟಿನ ಹುಕ್ಕುಂನಿಂದ ಸಸ್ಪೆಂಡ್ ಅಥವಾ ಬರತರಫ್ ಮಾಡಲ್ಪಡಬಹುದು, ಪರಂತು ಮೈಸೂರು ಸರಾರದ ಮುಂಜೂರಾತಿಯನ್ನು ಮುಂದಾಗಿ ಪಡಕೊಳ್ಳದೇ ರಿಜಿಸ್ಟ್ರಾರೂ, ಡೆಪ್ಯುಟಿ ರಿಜಿಸ್ಟ್ರಾರೂ, ಬರತರಫ್ ಮಾಡಲ್ಪಡ ಕೂಡದು.

357

ಚೀಫ್ ಕೋರ್ಟು, ಮಿಕ್ಕ ತವಾಂ ಕೋರ್ಟುಗಳ ಮೇಲೂ ಅಧಿಕಾರ ಉಳ್ಳ ಸೈ ಕೋರ್ಟಾಗಿರತಕ್ಕದ್ದು.

10ನೇ ಸೆಕ್ಷನ್.—ಚೀಫ್ ಕೋರ್ಟು, ತತ್ಕಾಲದಲ್ಲಿ ಜಾರೀಯಲ್ಲಿರುವ ತವಾಂ ಅಕ್ಟುಗಳ ಕೆಲಸಕ್ಕಾಗಿ, ಮೈಸೂರು, ಶೀವೆಯಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್, ರಿವಿಶರ್ಜಿಸ್ ಮತ್ತು ಪುನರ್ವಿಮರ್ಶೆ ಇವುಗಳ ಬ್ಯಾಬತ್ತು ಎಲ್ಲಕ್ಕೂ ಮೇಲ್ಪಟ್ಟ ಕ್ವೋರ್ಟಾಗಿ ಯಿರಿಸಲ್ಪಟ್ಟು, ಸದರೀ ರಾಜ್ಯದಲ್ಲಿ ಸಿವಿಲ್ ವ ಕ್ರಿಮಿನಲ್ ಬಾಬತು ತವಾಂ ಕೋರ್ಟುಗಳೂ, ಚೀಫ್ ಕೋರ್ಟಿನ ಮೇಲ್ವಿಚಾರಣೆ ಮತ್ತು ಅಧಿಕಾರಕ್ಕೆ ಒಳಪಡತಕ್ಕದ್ದು.

ಪಾರಂಪರ್ಯ ವಗೈರೇ ಮೊಕದ್ದಮೆಗಳಲ್ಲಿ ಕಾರ್ಯ.

11ನೇ ಸೆಕ್ಷನ್.—ಯಾವ ವ್ಯಾಜ್ಯದಲ್ಲಿ ಯಾಗಲಿ, ನಡವಳಿತದಲ್ಲಾಗಲಿ, ಪಾರಂಪರ್ಯ, ದಾಯ ವಿಭಾಜಿ, ಅಥವಾ ಜಾತಿ, ಯಾವದಾದರೂ ಮತ ಸಂಬಂಧವಾದ ವಾಡಿಕೆ ನಿಬಂಧನೆ ಇಂತಾದ್ದನ್ನು ಕುರಿತ ಯಾವ ವಿಚಾರವನ್ನಾಗಲಿ, ತೀರ್ಮಾನ ಮಾಡಲಿಕ್ಕೆ ಚೀಫ್ ಕೋರ್ಟಿಗೆ ಅವಶ್ಯಕವಾಗಿದ್ದರೆ,

(a.) ಕಕ್ಷಿಗಾರರು ಮಹಮ್ಮದರಾಗಿದ್ದರೆ, ಮಹಮ್ಮದ್ದಲಾ, ಮತ್ತು ಕಕ್ಷಿಗಾರರು ಹಿಂದುಗಳಾಗಿದ್ದರೆ ಹಿಂದು ಧರ್ಮಶಾಸ್ತ್ರ, ಅಥವಾ,

(b.) ಕಾನೂನಿನ ಬಲವುಳ್ಳ ಮತ್ತು ಕಕ್ಷಿಗಾರರಿಗಾಗಲಿ, ಅವರಿಗೆ ಸಂಬಂಧಿಸಿದ ಸ್ವತ್ತಿಗಾಗಲಿ, ಅಧಿಕಾರ ಉಂಟು ಮಾಡುವ ಮಾಮೂಲ್ ಯಾವದಾದರೂ ಯಿದ್ದರೆ ಅಂತಾ ಕಾರ್ಯ ಯಾ ಮಾಮೂಲ್ ನ್ಯಾಯವಿಧಾಯಕ ಆಕ್ಟಿನ ದೆಸೆಯಿಂದ ಬದಲಾಯಿಸಲ್ಪಟ್ಟಿದೆ ಅಥವಾ ರದ್ದು ಮಾಡಲ್ಪಡದೆ ಯಿದ್ದರೆ ಅಂಥಾ ಮಾಮೂಲು, ಫೈಸಲಿನ ನಿಬಂಧನೆಯನ್ನು ವಿಚಾರಿಸತಕ್ಕದ್ದು.

(c.) ವಿಶೇಷವಾದ ರೂಲ್ ನೆಲಗೊಳ್ಳದೆ ಯಿರುವ ಮೊಕದ್ದಮೆಗಳಲ್ಲಿ ಚೀಫ್ ಕೋರ್ಟಿನವರು, ನ್ಯಾಯಕ್ಕೂ, ಧರ್ಮಕ್ಕೂ, ಯುಕ್ತಾಯುಕ್ತ ವಿಚಾರಕ್ಕೂ ಅನುಗುಣವಾಗಿ ಕೆಲಸವನ್ನು ನಿರ್ವಹಿಸತಕ್ಕದ್ದು.

ಚೀಫ್ ಕೋರ್ಟಿನ ಸಾಧಾರಣ ಅಸಲ್ ಸಿವಿಲ್ ಅಧಿಕಾರ.

12ನೇ ಸೆಕ್ಷನ್.—ಮೈಸೂರು ಸರ್ಕಾರದವರು ಆಗಿಂದಾಗ್ಗೆ ಇಸ್ತಿಹಾರ್‌ನಾಮೇ ಮೂಲಕ ಸರ್ಕಾರೀ ಗೆಜೆಟ್‌ನಲ್ಲಿ ಫಾಯಿಷ್ ಮಾಡಿ ನಿಯಮಿಸಿ ಬಹುದಾದ ಅಂತಾ ಸ್ಥಳ ಸರಹದ್ದುಗಳೊಳಗೆ ಉಂಟಾಗತಕ್ಕ ಸಿವಿಲ್ ಸ್ವರೂಪುಳ್ಳ ತವಾಂವ್ಯಾಜ್ಯಗಳಲ್ಲೂ, ನಡವಳಿತಗಳಲ್ಲೂ, ಚೀಫ್ ಕೋರ್ಟಿನವರು, ಬಂದು ಡಿಸ್ಟ್ರಿಕ್ಟ್ ಕೋರ್ಟಿನ ಸಾಧಾರಣ, ಅಸಲ್ ಸಿವಿಲ್ ಅಧಿಕಾರವುಂಟಾಗಿ ಅದನ್ನು ಚಲಾಯಿಸತಕ್ಕದ್ದು. ಹಾಗೆ ಫಾಯಿಷ್‌ಮಾಡಲ್ಪಟ್ಟು ಮತ್ತು ನೇಮಿಸಲ್ಪಟ್ಟ ಸ್ಥಳ ಸರಹದ್ದುಗಳು, ಸಿವಿಲ್ ಪ್ರೊಸೀಜ್ಯೂರ್ ಕೋಡಿನ ಅರ್ಥರೀತ್ಯಾ ಬಂದು ಡಿಸ್ಟ್ರಿಕ್ಟೆಂದು ಭಾವಿಸಲ್ಪಡತಕ್ಕದ್ದು. ಈ ಸೆಕ್ಷನ್ನಿನಿಂದ ಚೀಫ್ ಕೋರ್ಟಿಗೆ ಉಂಟುಮಾಡಲ್ಪಟ್ಟ ಅಸಲ್ ಸಿವಿಲ್ ಅಧಿಕಾರವನ್ನು ಚಲಾಯಿಸುವ ಬಗ್ಗೆ ಚೀಫ್ ಕೋರ್ಟಿನವರು, ಅಂತಾ ಕೋರ್ಟಿನ ಜಡ್ಜ್‌ಗಳ ಪೈಕೀ ಒಬ್ಬರನ್ನು ನೇಮಿಸತಕ್ಕದ್ದು, ಸದರೀ ಜಡ್ಜ್‌ಯು ಮೇಲೆಕಂಡ ವಿಷಯಕ್ಕಾಗಿ, "1883ನೇ ಇಸವಿಯ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯೂಲೇರ್ಷ" ಅನುಸರಿಸಿ ಮೇಲೆ ಕಂಡ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಜಡ್ಜ್‌ರಿಯಾಗಿ ಅವರು ನೊಕರರ್ನಾಡಲ್ಪಟ್ಟಿದ್ದರೆ ಹ್ಯಾಗೋ ಅದೇ ರೀತಿಯಾಗಿ ಮತ್ತು ಅದೇ ನಡವಳಿತಗಳಿಗೆ ಒಳಪಟ್ಟು ತಮ್ಮ ಕೆಲಸಗಳನ್ನು ನಡಿಸತಕ್ಕದ್ದು.

ಚೀಫ್ ಕೋರ್ಟಿನ ಸಾಧಾರಣವಾದ ಅಸಲ್ ಕ್ರಿಮಿನಲ್ ಅಧಿಕಾರ.

13ನೇ ಸೆಕ್ಷನ್.—ಮೈಸೂರು ಗವರ್ನಮೆಂಟಿನವರು ಆಗಿಂದಾಗ್ಗೆ ಸರ್ಕಾರೀ ಗೆಜೆಟ್‌ನಲ್ಲಿ ಇಸ್ತಿಹಾರ್‌ನಾಮೆ ಮೂಲಕ ಪ್ರಕಟಿಸಲ್ಪಡತಕ್ಕ ಮತ್ತು ನೊಕರರ್ ಮಾಡಲ್ಪಡತಕ್ಕ ಸ್ಥಳ ಸರಹದ್ದುಗಳೊಳಗೆ, ಚೀಫ್ ಕೋರ್ಟಿನವರು ಬಂದು ಸೆಷ್ಷನ್ಸ್ ಕೋರ್ಟಿನ ಸಾಧಾರಣ ಅಸಲ್ ಕ್ರಿಮಿನಲ್ ಅಧಿಕಾರವನ್ನು ಪಡೆದು ಚಲಾಯಿಸತಕ್ಕದ್ದು. ಹಾಗೆ ಪ್ರಕಟಿಸಲ್ಪಟ್ಟ ಮತ್ತು ನೊಕರರ್‌ಮಾಡಲ್ಪಟ್ಟ, ಸ್ಥಳ ಸರಹದ್ದುಗಳು ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ ಅರ್ಥರೀತ್ಯಾ ಬಂದು ಸೆಷ್ಷನ್ ಡಿವೀರ್ಜನ್ನಾಗಿ ಭಾವಿಸಲ್ಪಡತಕ್ಕದ್ದು. ಈ ಸೆಕ್ಷನ್‌ನಿಂದ ಚೀಫ್ ಕೋರ್ಟಿನವರಿಗೆ ಉಂಟುಮಾಡಲ್ಪಟ್ಟ ಅಸಲ್ ಕ್ರಿಮಿನಲ್ ಅಧಿಕಾರವನ್ನು ಚಲಾಯಿಸುವ ಬಗ್ಗೆ ಚೀಫ್ ಕೋರ್ಟಿನವರು, ಅಂತಾ ಕೋರ್ಟಿನ ಜಡ್ಜ್‌ಗಳ ಪೈಕೀ ಒಬ್ಬರನ್ನು ನೇಮಿಸತಕ್ಕದ್ದು, ಅವರು ಕ್ರಿಮಿನಲ್ ಪ್ರೊಸೀಜ್ಯೂರ್ ಅನುಸರಿಸಿ ಮೇಲೆ ಕಂಡ ಸೆಷ್ಷ ಡಿವೀರ್ಜಗೋಸ್ಕರ ಸೆಷ್ಷನ್ಸ್ ಕೋರ್ಟು ಜಡ್ಜ್‌ರಾಗಿ ನೊಕರರ್ನಾಡಲ್ಪಟ್ಟಿದ್ದರೆ ಹ್ಯಾಗೋ ಅದೇರೀತಿಯಾಗಿ ಮತ್ತು ಬದಸ್ತೂರ್ ನಡವಳಿತಕ್ಕೆ ಒಳಪಟ್ಟು, ತಮ್ಮ ಕೆಲಸಗಳನ್ನು ನಡಿಸತಕ್ಕದ್ದು.

ಚೀಫ್ ಕೋರ್ಟಿನ ಸಾಧಾರಣ ಅಸಲ್ ಅಧಿಕಾರದ ಸರಹದ್ದಿನೊಳಗೆ, ಕೆಳ ಕೋರ್ಟುಗಳ ಫೈಸಲ್‌ಗಳ ಮೇಲೆ ಅಪ್ಪೀಲ್‌ಗಳು.

14ನೇ ಸೆಕ್ಷನ್—12 ನೇ 13ನೇ ಸೆಕ್ಷನ್‌ಗಳಲ್ಲಿ ಕಂಡ ಸ್ಥಳಸರಹದ್ದುಗಳೊಳಗೆ ಯಾವ ತಾಬೇದಾರೀ ಕೋರ್ಟಿನಿಂದಾಗಲಿ, ಕೊಡಲ್ಪಟ್ಟು, ಸಿವಿಲ್ ಯಾ ಕ್ರಿಮಿನಲ್ ಬಾಬತ ಫೈಸಲ್‌ಗಳು, ಹುಕ್ಕುಂಗಳು, ಡಿಕ್ರೀಗಳು ಯಾ ಸೆಂಟೆನ್ಸ್ ಯಾನೇ ತೀರ್ಪುಗಳು ಇಂತಾದ್ದರ ಮೇಲೆ ಬರತಕ್ಕ ಅಪ್ಪೀಲ್‌ಗಳು, ಬಂದು ಡಿಸ್ಟ್ರಿಕ್ಟ್ ಕೋರ್ಟಾಗಲಿ, ಸೆಷ್ಷ ಕೋರ್ಟಾಗಲಿ, ಕಾನೂನಿಂದ ಅವಕಾಶ ವುಂಟಾದರೆ, ಚೀಫ್ ಕೋರ್ಟಿಗೆ ದಾಖಲಾಗತಕ್ಕದ್ದು.

ಬಂದು ಡಿಸ್ಟ್ರಿಕ್ಟ್ ಕೋರ್ಟಿನಿಂದಲೂ, ಸೆಷ೯ಕೋರ್ಟಿನಿಂದಲೂ, ಹೀಲೆ ಕಂಡ ಸ್ಥಳ ಸರಹದ್ದುಗಳೊಳಗೆ ಸಾಮಾನ್ಯವಾಗಿ ಚಲಾಯಿಸಲ್ಪಡತಕ್ಕ ಇತರ ತವೂಂ ಅಧಿಕಾರಗಳೂ, ಚೀಫ್ ಕೋರ್ಟಿನಿಂದ ಚಲಾಯಿಸಲ್ಪಡತಕ್ಕದ್ದು.

15ನೇ ಸೆಕ್ಷನ್—(1) ಚೀಫ್ ಕೋರ್ಟಿಗೆ ಉಂಟುಮಾಡಲ್ಪಟ್ಟ ಸಾಧಾರಣ ಅಸಲ್ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರವನ್ನು ಚಲಾಯಿಸುವಲ್ಲಿ ಸದರೀ ಚೀಫ್ ಕೋರ್ಟಿನ ಒಬ್ಬ ಜಡ್ಜ್‌ರಿಯಿಂದ ಕೊಡಲ್ಪಟ್ಟ, ತೀರ್ಪುಗಳು, ಹುಕ್ಕುಂಗಳು, ಅಥವಾ ಫೈಸಲ್‌ಗಳು ಇವುಗಳ ಮೇಲಣ ಅಪ್ಪೀಲ್‌ಗಳು ಅವುಗಳನ್ನು ಕುರಿತ ದಾಖಲೆಗಳು ಮತ್ತು, ಅವುಗಳ ಪುನರ್ವಿಮರ್ಶೆಯ ಬಗ್ಗೆ ಅರ್ಜಿಗಳು ನ್ಯಾಯ ಸಮ್ಮತವಾದರೆ, ಚೀಫ್ ಕೋರ್ಟಿನ ಫುಲ್ ಬೆಂಚ್‌ನಿಂದ ವಿಚಾರಿಸಲ್ಪಡತಕ್ಕದ್ದು.

ಚೀಫ್ ಕೋರ್ಟನವರು ಅಸಲ್ ಅಧಿಕಾರವನ್ನು ಚಲಾಇಸುವಲ್ಲಿ ಕೊಟ್ಟ ಫೈಸಲಿನ ಮೇಲೆ ಅಪ್ಪೀಲ್‌ಗಳು.

(2) ತತ್ಕಾಲದಲ್ಲಿ ಜಾರೀಯಿರುವ ಯಾವ ಕಾನೂ ಅನುಸರಿಸಿ ಯಾಗಲಿ ಚೀಫ್ ಕೋರ್ಟಿಗೆ ಇಖಿಲಾಗತಕ್ಕ ಸಿವಿಲ್ ವ ಕ್ರಿಮಿನಲ್ ಬಾಬತು ಪ್ರತಿ ಅಪ್ಪೀಲೂ ಮತ್ತು ಫಾಸೇ ಸಜಾವನ್ನು ಕಾಯಂಮಾಡುವ ಬಗ್ಗೆ ಚೀಫ್ ಕೋರ್ಟಿಗೆ ರಿಫರ್ ಮಾಡಲ್ಪಟ್ಟ ಪ್ರತಿ ವೊಕದ್ದಮೆಯೂ, ಸದರೀ ಕೋರ್ಟಿನ ಇಬ್ಬರು ಜಡ್ಜ್‌ಗಳಿಗೆ ಕಡಮೆ ಇಲ್ಲದೆ, ಅಡಗಿರುವ ಬಂದು ನ್ಯಾಯಾಸನದಿಂದ ದರ್ಯಾಫ್ತು ಮಾಡಲ್ಪಡತಕ್ಕದ್ದು.

ಚೀಫ್ ಕೋರ್ಟಿಗೆ ಇತರ ಅಪ್ಪೀಲ್‌ಗಳು.

(3) ಕಾನೂನಿನ ಅಥವಾ ಕಾರ್ಯ ಬಲವುಳ್ಳ ವಾಡಿಕೇಯು, ಮತ್ತು ಯಾವದಾದರೂ ದಸ್ತಾವೇಜಿನ ಅಭಿಪ್ರಾಯ ಅಥವಾ ಸದರೀ ಜಡ್ಜ್‌ಯ ಮುಂದೆಯಾಗಲಿ, ಕೋರ್ಟಿನ ಮುಂದೆಯಾಗಲಿ ವಿಚಾರಣೆಯೊಳಗಿರುವ ಯಾವ ವ್ಯಾಜ್ಯದಲ್ಲಿಯಾಗಲಿ ಇತರ ನಡವಳಿತದಲ್ಲೂಗಲಿ, ತತ್ಕಾಲದೊಳಗೆ ಜಾರೀಯಿರುವ ಕಾರ್ಯ ಅನುಸರಿಸಿ ಮತ್ತೇನೂ ಅಪ್ಪೀಲಿರುವದಿಲ್ಲವೋ ಅಂತಾ ದಾವೆ ಯಾ ನಡವಳಿತದಲ್ಲಿ ಯಾವದಾದರೂ ಸಾಕ್ಷ್ಯದ ಅಂಗೀಕಾರ ಇಂತಾದ್ದರ ಯಾವ ಅಂಶವನ್ನಾಗಲಿ ಚೀಫ್ ಕೋರ್ಟಿನ ಯಾವ ಜಡ್ಜ್‌ಯಾಗಲಿ, ಸದರೀ ಕೋರ್ಟಿನ ಬಂದು ಫುಲ್‌ಬೆಂಚಿಗೆ, ರಿಫರ್ ಮಾಡಬಹುದು.

ಫುಲ್ ಬೆಂಚಿಗೆ (ದಾನೆ ಯಲ್ಲ ಜಡ್ಜ್‌ಗಳೂ ಸೇರಿದ ಕೋರ್ಟಿಗೆ) ದಾಖಲೆ.

(4) ಚೀಫ್ ಕೋರ್ಟಿನ ಯಾವ ಫುಲ್ ಬೆಂಚಿಗಾಗಲಿ ಸೇರಿಯಿರುವ ಜಡ್ಜ್‌ಗಳ ಪೈಕೀ ಅಧಿಕ ಸಂಖ್ಯೆಯವರ ತೀರ್ಪು ಚೀಫ್ ಕೋರ್ಟಿನ ತೀರ್ಪಾಗಿರತಕ್ಕದ್ದು. ಚೀಫ್ ಕೋರ್ಟಿನ ಬಂದು ನ್ಯಾಯಸ್ಥಾನಕ್ಕೆ ಇಬ್ಬರು ಜಡ್ಜ್‌ಗಳು ಮಾತ್ರ ಸೇರಿಯಿದ್ದ ಪಕ್ಷಕ್ಕೆ ಮತ್ತು, ಅಂತಾ ಕೋರ್ಟಿನ ಮುಂದೆ ವಿಚಾರಣೆಯಲ್ಲಿರುವ ಯಾವದಾದರೂ ಮುಖ್ಯಾಂಶದಲ್ಲಿ ಅಂತಾ ಜಡ್ಜ್‌ಗಳೊಳಿಗೆ ಪರಸ್ಪರ ಅಭಿಪ್ರಾಯ ಭೇದ ವುಂಟಾಗಿದ್ದರೆ, ಅಂತಾ ಅಂಶವು, ಬಂದು ಫುಲ್ ಬೆಂಚಿಗೆ ರಿಫರ್ ಮಾಡಲ್ಪಟ್ಟು, ಅಂತಾ ಫುಲ್ ಬೆಂಚಿನಲ್ಲಿ ಹೆಚ್ಚು ಸಂಖ್ಯೆಯುಳ್ಳ ಜಡ್ಜ್‌ಗಳ ಫೈಸಲು ಚೀಫ್ ಕೋರ್ಟಿನ ಫೈಸಲಾಗಿರತಕ್ಕದ್ದು.

ಅಧಿಕ ಸಂಖ್ಯೆಯವರ ತೀರ್ಪು ವ್ಯಾಪಕವಾಗಿರತಕ್ಕದ್ದು.

16ನೇ ಸೆಕ್ಷನ್—ಚೀಫ್ ಕೋರ್ಟನವರು, ತಮಗೆ ಯುಕ್ತ ತೋರಿದಾಗ ತಮ್ಮಲ್ಲಿ ವಿಚಾರಣೆಯೊಳಗಿರುವ ಯಾವದಾದರೂ ವೊಕ್ಕದ್ದಮೆ, ಸಿವಿಲ್ ಅಥವಾ ಕ್ರಿಮಿನಲ್ ಸ್ವರೂಪಳುಳ್ಳದ್ದಾಗಿರುವಲ್ಲಿ, ಅಸಲ್ ಅಥವಾ ಅಪ್ಪೆಲ್ಲೇಟಾಗಿದ್ದಲ್ಲಿ ಪರಂತು ತಕ್ಕ ಅಧಿಕಾರವುಳ್ಳ, ಯಾವ ಕೋರ್ಟಿಗಾಗಲಿ, ಅದು ಈ ರೆಗ್ಯೂಲೇಷನಿನ 12 ಮತ್ತು 13ನೇ ಸೆಕ್ಷನ್‌ಗಳಲ್ಲಿ ಕಂಡ ಸ್ಥಳ ಸರಹದ್ದುಗಳೊಳಗಿರಲಿ, ಅವುಗಳ ಆಚೆಗಿರಲಿ, ವರ್ಗಮಾಡಬಹುದು.

ಚೀಫ್ ಕೋರ್ಟನವರು ವೊಕದ್ದಮೆಗಳನ್ನು ವರ್ಗಮಾಡಬಹುದು.

17ನೆ ಸೆಕ್ಷನ್.—ಮೈಸೂರು ಸರ್ಕಾರದವರು, ಕೋರ್ಟು ಮಾಡುವ ಬಗ್ಗೆ ಆಗಿಂದಾಗ್ಗೆ ವೊಕರರ್ ಮಾಡಬಹುದಾದ ಸ್ಥಳದಲ್ಲ ಚೀಫ್ ಕೋರ್ಟನವರು ತಮ್ಮ ಕೋರ್ಟು ಮಾಡತಕ್ಕದ್ದು.

ಚೀಫ್ ಕೋರ್ಟು ಸೇರುವ ಸ್ಥಳ.

ಈ ರೆಗ್ಯೂಲೇಷನ್ನಿಂದಾಗಲಿ, ತತ್ಕಾಲದೊಳಗೆ ಜಾರೀ ಇರುವ ಯಾವದಾದರೂ ಇತರ ಕಾರ್ಯನಿಂದಾಗಲಿ, ಚೀಫ್ ಕೋರ್ಟಿಗೆ ವುಂಟು ಮಾಡಲ್ಪಟ್ಟ ಅಧಿಕಾರಗಳು, ಈ ಸೆಕ್ಷನಿನ 1ನೇ ಪ್ಯಾರಾ ಅನುಸರಿಸಿ ವೊಕರರ್ಮಾಡಲ್ಪಟ್ಟ ಸ್ಥಳ ಶಿವಾಯಿ ಯಾವ ಸ್ಥಳದೊಳಗಾಗಲಿ, ಸರ್ಕ್ಯೂಟ್ ದ್ವಾರಾ ಅಂತಾ ಇತರ ಕೆಲವು ಸ್ಥಳಗಳಲ್ಲಿಯಾಗಲಿ, ಚಲಾಯಿಸುವದು ಅನುಕೂಲವೆಂದು ಮೈಸೂರು ಗವರ್ಮೆಂಟಿಗೆ ಕಾಣಬಂದರೆ, ಸದರೀ ಮೈಸೂರು ಗವರ್ಮೆಂಟಿನವರು ಹುಕ್ಕುಂ ಮೂಲಕ, ಅಂತಾ ಹುಕ್ಕುಂ ಮೂಲಕ ನೇಮಿಸಲ್ಪಡಬಹುದಾದ ಅಂತಾ ಸ್ಥಳ ಯಾ ಸ್ಥಳದಲ್ಲಿ ಕೋರ್ಟು ಮಾಡುವಂತೆ, ಅಂತಾ ಕೋರ್ಟಿನ ಜಡ್ಜ್‌ಗಳ ಪೈಕಿ ಒಬ್ಬರು ಅಥವಾ ಹೆಚ್ಚು ವುಂಟು ಜಡ್ಜ್‌ಗಳಿಗೆ ಅಧಿಕಾರ ಕೊಡತಕ್ಕದ್ದು ಮತ್ತು ನೇಮಿಸತಕ್ಕದ್ದು. ಅಂತಾ ಹುಕ್ಕುಂ ಅನುಸರಿಸಿ ಕೆಲಸ ನೋಡುವ ಜಡ್ಜ್‌ಯಾಗಲಿ ಜಡ್ಜ್‌ಗಳಾಗಲಿ ಸಾಧಾರಣವಾಗಿ ಕೋರ್ಟು ಮಾಡುವ ಸ್ಥಳದಲ್ಲಿ, ಸಂದರ್ಭಾನುಸಾರ, ಚೀಫ್ ಕೋರ್ಟಿನ ಒಬ್ಬ ಜಡ್ಜ್‌ಯಿಂದ ಅಥವಾ ಜಡ್ಜ್‌ಗಳಿಂದ ಪಡೆಯಬಹುದಾದ ಮತ್ತು ಚಲಾಯಿಸಲ್ಪಡತಕ್ಕ ಅಂತಾ ಅಧಿಕಾರವನ್ನೇ ಪಡೆದು ಚಲಾಯಿಸತಕ್ಕದ್ದು.

18ನೇ ಸೆಕ್ಷನ್.—ಮೈಸೂರು ಗವರ್ನಮೆಂಟಿನವರು, ಈ ಸೆಕ್ಷನ್‌ನಲ್ಲಿ ವಿವರಿಸಲ್ಪಟ್ಟ ವಿಶಿಷ್ಟ ಅಧಿಕಾರಗಳನ್ನಾಗಲಿ ಯಾವದಾದರೂ ಅಧಿಕಾರಗಳನ್ನಾಗಲಿ ಒಬ್ಬ ಚೀಫ್ ಜಡ್ಜ್‌ಗೆ ಉಂಟುಮಾಡತಕ್ಕದ್ದು.

ಚೀಫ್ ಜಡ್ಜ್‌ಯವರಿಗೆ ವುಂಟುಮಾಡಲ್ಪಡ ಬಹುದಾದ ಅಧಿಕಾರಗಳು.

ಯುಕ್ತವೆಂದು ಭಾವಿಸಿದರೆ ಆಮೇರೆ ಉಂಟುಮಾಡಬಹುದು, ಮತ್ತು ಅಂಥಾ ಯಾವ ಹುಕ್ಕುಮನ್ನಾಗಲಿ ಆಗಿಂದಾಗ್ಗೆ ರದ್ದು ಮಾಡಬಹುದು.

ಈ ಸೆಕ್ಷನ್ ಅನುಸರಿಸಿ ಅಧಿಕಾರ ಕೊಡಲ್ಪಟ್ಟ ಚೀಫ್ ಜಡ್ಜ್‌ಯು, ಈ ಸೆಕ್ಷನ್ ಅನುಸರಿಸಿ ತಮಗೆ ವುಂಟುಮಾಡಲ್ಪಟ್ಟ ವಿಶೇಷ್ಯ ಅಧಿಕಾರಗಳನ್ನೂ ಚಲಾಯಿಸತಕ್ಕದ್ದು. ಮತ್ತು ತಮ್ಮಿಂದ ಅಂತಾ ಅಧಿಕಾರಗಳು ಚಲಾಯಿಸುವಾಗವು ಈ ರೆಗ್ಯೂಲೇಷನ್ ಅನುಸರಿಸಿ ಚೀಫ್ ಕೋರ್ಟಿನಿಂದ ಸದರೀ ಅಧಿಕಾರವು ಚಲಾಯಿಸಲ್ಪಟ್ಟಂತೆ ಭಾವಿಸಲ್ಪಡತಕ್ಕದ್ದು.

ಈ ಸೆಕ್ಷನ್‌ನಲ್ಲಿ ಸೂಚಿಸಲ್ಪಟ್ಟ ಅಧಿಕಾರಗಳ್ಯಾವವಂದರೆ—

1ನೇದು—7ನೇ ಸೆಕ್ಷನ್ 1ನೇ ಪ್ಯಾರ ಅನುಸರಿಸಿ ಮಿನಿಸ್ಟೀರಿಯಲ್ ಆಫಿಸರ್‌ಗಳ ವೊಕರರಾತಿ.

2ನೇದು.—8ನೇ ಸೆಕ್ಷನ್ ಅನುಸರಿಸಿ ಮಿನಿಸ್ಟೀರಿಯಲ್ ಆಫಿಸರ್‌ಗಳ ಅಧಿಕಾರಗಳನ್ನೂ ಕೆಲಸಗಳನ್ನೂ ಕುರಿತು ಅಪ್ಪಣೆ.

3ನೇದು—ಚೀಫ್ ಕೋರ್ಟಿನ ಕೆಲಸವನ್ನು ತಮಗೂ ಸದರೀ ಕೋರ್ಟಿನ ಇತರ ಜಡ್ಜ್‌ಗಳಿಗೂ ಹಂಚುವಿಕೆ.

19ನೇ ಸೆಕ್ಷನ್.—ಇದರಲ್ಲಿ ಕಂಡ ಮೇರೆ ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರ ಆಕ್ಟಿನ ಮೂಲಕವಾಗಿ ಅನ್ಯಥಾ ವಿಧಿಸಲ್ಪಟ್ಟ ಹೊರತು, ಚೀಫ್ ಕೋರ್ಟಿನವರು ತಮ್ಮ ಜಡ್ಜ್‌ಗಳ ಪೈಕಿ ಒಬ್ಬರಿಂದಾಗಲಿ ಹೆಚ್ಚು ಮಂದಿಯಿಂದಾಗಲಿ ಈ ರೆಗ್ಯೂಲೇಷನ್‌ನಿಂದ ಅಥವಾ ತತ್ಕಾಲದೊಳಗೆ ಜಾರೀಯಿರುವ ಯಾವದಾದರೂ ಇತರ ಆಕ್ಟಿನಿಂದ ಸದರೀ ಕೋರ್ಟಿಗೆ ವುಂಟು ಮಾಡಲ್ಪಟ್ಟ ಯಾವದಾದರೂ ಅಧಿಕಾರಗಳನ್ನು ಚಲಾಯಿಸುವ ಬಗ್ಯೆ ತಮಗೆ ಯುಕ್ತ ತೋರುವರೀತಿಯಾಗಿ ಯೇರ್ಪಾಡು ಮಾಡುವದಕ್ಕೆ ರೂಲ್ಸ್‌ನ್ನು ಮಾಡಬಹುದು.

ಚೀಫ್ ಕೋರ್ಟಿನವರಿಗೆ ವುಂಟುಮಾಡಲ್ಪಟ್ಟ ಅಧಿಕಾರಗಳನ್ನು ಒಬ್ಬ ಜಡ್ಜ್‌ಯಾಗಲಿ ಅನೇಕ ಜಡ್ಜ್‌ಗಳಾಗಲಿ ಚಲಾಯಿಸುವ ಬಗ್ಯೆ ರೂಲ್ಸ್.

ಪರಂತು ಯಾವ ಕೋರ್ಟಿನಿಂದಾಗಲಿ ಕೊಡಲ್ಪಟ್ಟ ಡಿಕ್ರೀ, ಹುಕ್ಕುಂ ಸೆರ್ಟಿಸು, ಯಾ ತೀರ್ಪು ಇಂತಾದ್ದು ಬಬ್ಬರಾಗಿ ಕೋರ್ಟು ವುಂಡುವ ಚೀಫ್ ಕೋರ್ಟಿನ ಯಾವ ಜಡ್ಜ್‌ಯಿಂದಾಗಲಿ ತಿರಿಗಿಸಲ್ಪಡತಕ್ಕದ್ದಲ್ಲವು.

20ನೇ ಸೆಕ್ಷನ್.—ಚೀಫ್ ಕೋರ್ಟಿನವರು ಆಗಿಂದಾಗ್ಗೆ—

ರೂಲ್ಸ್ ಮಾಡುವದಕ್ಕೆ ಚೀಫ್ ಕೋರ್ಟಿನ ಅಧಿಕಾರ.

(a) ಈ ರೆಗ್ಯೂಲೇಷನಿಗೆ ಅನುಸಾರವಾಗಿ ಕೋರ್ಟುಗಳ ಮಿನಿಸ್ಟೀರಿಯಲ್ ಆಫೀಸರ್‌ಗಳಿಗೆ ಸದರೀ ಕೋರ್ಟಿನ ಮೇಲ್‌ವಿಚಾರಣೆಗೆ ಒಳಪಟ್ಟು ಮಿನಿಸ್ಟೀರಿಯಲ್ ಸ್ವರೂಪವುಳ್ಳ ತಮಗೆ ಯುಕ್ತ ತೋರುವ ಅಂತಾ ಅಧಿಕಾರಗಳನ್ನು ವ ಕೆಲಸಗಳನ್ನು ವುಂಟುಮಾಡುವ, ವಿಧಿಸುವ ಬಗ್ಯೂ ಮತ್ತು ಹಾಗೆ ವುಂಟುಮಾಡಲ್ಪಟ್ಟ ಮತ್ತು ವಿಧಿಸಲ್ಪಟ್ಟ ಅಧಿಕಾರಗಳು ಕೆಲಸಗಳು ಯಾವ ರೀತಿಯಾಗಿ ಚಲಾಯಿಸಲ್ಪಡತಕ್ಕದ್ದೋ ಮತ್ತು ನೆರವೇರಿಸಲ್ಪಡತಕ್ಕದ್ದೋ ಅದನ್ನು ಕ್ರಮ ಪಡಿಸುವಬಗ್ಯೂ ರೂಲ್ಸ್ ಮಾಡತಕ್ಕದ್ದು.

(b) ಅಂತಾ ಕೋರ್ಟುಗಳಲ್ಲಿ ವ್ಯವಹರಿಸುವ ಪ್ಲೀಡರ್‌ಗಳು ಯಾವ ಮೊಕದ್ದಮೆಗಳಲ್ಲಿ ಇಂಗ್ಲಿಷ್‌ನೊಳಗೆ ಅಪ್ರೈಸ್‌ಯಾನೆ ಅರಜ್ ಮಾಡುವದಕ್ಕೆ ಅವಕಾಶ ಕೊಡಲ್ಪಡತಕ್ಕದ್ದೋ ಅದನ್ನು ನಿಶ್ಚಯಿಸುವ ಬಗ್ಯೆ ಈ ರೆಗ್ಯೂಲೇಷನಿಗೆ ಅನುಸಾರವಾಗಿ ರೂಲ್ಸ್ ಮಾಡತಕ್ಕದ್ದು.

(c) ಅಂತಾ ಬುಕ್ಕುಗಳಿಗೂ, ಖತಾಯಿತಿಗಳಿಗೂ, ಖಾನೇಷುಮಾರೀಗಳಿಗೂ, ಲೆಕ್ಕಗಳಿಗೂ ಸದರೀ ಕೋರ್ಟಿನವರು ಜರೂರೆಂದ್ಯೆಯಿಸುವ ನಮೂನೆಗಳನ್ನು ವಿಧಿಸತಕ್ಕದ್ದು. ಅಂತಾ ನಮೂನೇಗಳು ಅಂತಾ ಕೋರ್ಟುಗಳಲ್ಲಿ ಇಡಲ್ಪಟ್ಟು, ಅಥವಾ ಮಾಡಲ್ಪಟ್ಟು ಅಥವಾ ಸೇರಿಸಲ್ಪಡತಕ್ಕದ್ದು ಅಥವಾ ಯಾವ ಅಧಿಕಾರಿಗಾಗಲಿ ಕಳುಹಿಸಲ್ಪಡತಕ್ಕದ್ದು.

(d) ಈ ರೆಗ್ಯೂಲೇಷನಿಗೆ ಅನುಗುಣವಾಗಿ ಅಂತಾ ಕೋರ್ಟುಗಳ ತನಿಖೀ ಬಗ್ಯೂ ಆದರ ಕೆಲಸ ನಡಿಯುವದರ ಮೇಲ್‌ವಿಚಾರಣೆಗಾಗಿಯೂ ಯೇರ್ಪಾಡನ್ನು ಮಾಡಿ ರೂಲ್ಸ್ ಮಾಡತಕ್ಕದ್ದು.

(e) ಈ ರೆಗ್ಯೂಲೇಷನಿಗೆ ಅನುಗುಣವಾಗಿ ಅಂತಾ ರೂಲ್ಸನ್ನು ಮಾಡತಕ್ಕದ್ದು. ಅಂತಾ ವಿಚಾರಣೆಗಳನ್ನು ವಿಚಾರಿಸತಕ್ಕದ್ದು. ಮತ್ತು ಮೈಸೂರು ಗವರ್ನಮೆಂಟಿಗೆ ಯುಕ್ತ ತೋರಬಹುದಾದ ಮೇರೆ ಅಂತಾ ಕೋರ್ಟುಗಳ ಜುಡಿಷಿಯಲ್ ಮತ್ತು ಮಿನಿಸ್ಟೀರಿಯಲ್ ಆಫಿಸರ್‌ಗಳ ಲಾಯಖೀಯನ್ನು ಅಭಿವೃದ್ಧಿ ಪಡಿಸುವ ಮತ್ತು ಅಂತಾ ಆಫಿಸರ್‌ಗಳಲ್ಲಿ ಯುಕ್ತವಾದ ಶಿಕ್ಷೆಯನ್ನು ಕಾಪಾಡುವ ಉದ್ದೇಶಂದಿದ ಸದರೀ ಗವರ್ನಮೆಂಟಿಗೆ ಅಂತಾ ಸಿಫಾರಸ್‌ಗಳನ್ನು ಮಾಡತಕ್ಕದ್ದು.

19ನೇ ಮತ್ತು 20ನೇ ಸೆಕ್ಷಗಳನುಸರಿಸಿ ರೂಲ್ಸ್ ವ ನಮೂನೆಗಳನ್ನು ಮೈಸೂರು ಗವರ್ಮೆಂಟಿಗೆ ಮಂಜೂರಾತೀ ಬಗ್ಯೆ ಕಳುಹಿಸತಕ್ಕದ್ದು.

21ನೇ ಸೆಕ್ಷ.—19 ಮತ್ತು 20ನೇ ಸೆಕ್ಷಗಳನುಸರಿಸಿ ಮಾಡಲ್ಪಟ್ಟ ವಿಷ್ಯ ರೂಲ್ಸಗಳೂ, ವಿಧಿಸಲ್ಪಟ್ಟ ವಿಷಿಷ್ಟ ನಮೂನೆಗಳೂ ಮೈಸೂರು ಗವರ್ಮೆಂಟಿನ ಮಂಜೂರಾತಿಯಬಗ್ಯೆ ಕಳುಹಿಸಲ್ಪಡತಕ್ಕದ್ದು, ಮತ್ತು ಅಂತಾ ಮಂಜೂರಾತಿ ಬಂದ ಮೇಲೆ ಸರ್ಕಾರೀ ಗೆಜೆಟ್‌ನಲ್ಲಿ ಸ್ಪಕಟಿಸಲ್ಪಟ್ಟು ಆ ಮೇಲೆ ಕಾನೂ೯ ಬಲವನ್ನು ಪಡೆಯತಕ್ಕದ್ದು.

22ನೇ ಸೆಕ್ಷ—ಕೋರ್ಟಿನ ಕೆಲಸ ನಡೆಯುವ ಬಗ್ಯೆ ಜರೂರಾಗಿರಬಹುದಾದ ಅಂತಾ ರಿಜಿಸ್ಟರ್‌ಗಳನ್ನೂ, ವಹಿಗಳನ್ನೂ ಲೆಕ್ಕಗಳನ್ನೂ, ಚೀಫ್ ಕೋರ್ಟಿನವರು ಯಿಡತಕ್ಕದ್ದಲ್ಲದೆ, ಸದರೀ ರಿಜಿಸ್ಟರ್‌ಗಳ, ವಹಿಗಳ ಮತ್ತು ಲೆಕ್ಕಗಳ ನಕ್ಕಲ್‌ಗಳನ್ನೂ ಯಾ ಯೆಕಸ್ಟ್ರಾಕ್ಟುಗಳನ್ನೂ, ಚೀಫ್ ಕೋರ್ಟಿನಲ್ಲಿಯೂ ಅದಕ್ಕೆ ತಾಬೇದಾರೀಯಾದ ಕೋರ್ಟುಗಳಲ್ಲಿಯೂ, ನಡಿಸಲ್ಪಟ್ಟ ಕೆಲಸದ ಬಾಬತು ಅಂತಾ ತಖ್ತೇಗಳನ್ನೂ ಮೈಸೂರು ಗವರ್ಮೆಂಟ್‌ನಿಂದ ಅಪೇಕ್ಷಿಸಲ್ಪಟ್ಟಾಗ ಅವರಿಗೆ ಕಳುಹಿಸತಕ್ಕದ್ದು.

ಚೀಫ್ ಕೋರ್ಟಿನವರು ರಿಜಿಸ್ಟರ್ ವಗೈರೇಯನ್ನು ಯಿಡತಕ್ಕದ್ದು.

ವಿಚಾರಣೆಯೊಳಗಿರುವ ವೊಕದ್ದಮೆಗಳು, ಅಪ್ಪೀಲ್‌ಗಳು ಮತ್ತು ಅರ್ಜೀಗಳು.

23ನೇ ಸೆಕ್ಷ—ನಂದೀದುರ್ಗ ಡಿವೀಜ್ ಡಿಸ್ಟ್ರಿಕ್ಟುವ ಸೆಷ್ ಜಡ್ಜ್‌ರ ಕೋರ್ಟಿನ ಮುಂದೆ ಸ೯ 1884ನೇ ಮೇ 28ನೇ ಮರುಕ್ಕಂನಲ್ಲಿ ವಿಚಾರಣೆಯಲ್ಲಿರತಕ್ಕ ತಮಾಂ ಸಿವಿಲ್ ಯಾ ಕ್ರಿಮಿನಲ್ ವೊಕದ್ದಮೆಗಳೂ, ಅಪ್ಪೀಲ್‌ಗಳೂ, ಅರ್ಜೀಗಳೂ, (ಬಬ್ಬು ಸಬಾರ್ಡಿನೇಟ್ ಜಡ್ಜ್‌ರ ಕೋರ್ಟಿನ ಸ್ಥಳ ಅಧಿಕಾರದೊಳಗೆ ಇರತಕ್ಕ ಅಂತಾ ಸಿವಿಲ್ ವೊಕದ್ದಮೆಗಳೂ ಅರ್ಜೀಗಳೂ ಹೊರತು) ಈ ರೆಗ್ಯೂಲೇಷ್ ಅನುಸರಿಸಿ ಚೀಫ್ ಕೋರ್ಟಿನಿಂದ ವಿಚಾರಿಸಲ್ಪಟ್ಟು ಫೈಸಲ್ ಮಾಡಲ್ಪಡತಕ್ಕದ್ದು.

ಬೆಂಗಳೂರು,
21ನೇ ಮೇ 1884. }

ಕೆ. ಶೇಷಾದ್ರಿ ಐಯ್ಯರ್,
ದೀವಾ.

Mysore Government Press, Bangalore.—1884.